ಶ್ರೀ ಬಿ.ಎಂ. ಇದಿನಬ್ಬ.—ಅಧ್ಯಾಪಕರು ಬಹಳ ಕಷ್ಟದಲ್ಲಿರತಕ್ಕಂತಹವರು, ''ಗೆಂಬ್ಬ ಮೇಲೆ ಬ್ರಹ್ಮಾಸ್ತ್ರ ಏಕೆ?'' ಹೈದರಾಬಾದ್ ವೇತನ ಶ್ರೇಣಿ ಕೊಡುವಂತಹ ವಿಚಾರವನ್ನು ಮಾಡಬಹುದಲ್ಲ.

ಶ್ರೀ ಎಚ್.ಜಿ. ಗೋವಿಂದೇಗೌಡ.—ಕೋರ್ಟಿನವರು ನೀವೇ ಮಾಡಿ ಎಂದು ವಾಪಸ್ ಕಳಿಸಿದರೆ, ಆವಾಗ ಅದನ್ನು ನಾವೇ ತೀರ್ಮಾನ ಮಾಡುತ್ತೇವೆ.

ಉಚಿತವಾಗಿ ಪಠ್ಯಪುಸ್ತಕಗಳನ್ನು ಹಂಚುವುದು

೭೧೯. ಶ್ರೀ ಪಿ.ಸಿ. ಮಂಜಿನಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಶಿಕ್ಷಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಚಿತವಾಗಿ ಪಠ್ಯಪುಸ್ತಕಗಳನ್ನು ಎಲ್ಲಾ ಸರ್ಕಾರಿ ಹಾಗೂ ಅನುದಾನ ಪಡೆಯುವ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಒದಗಿಸಿದ್ದು ಸದರಿ ವಿದ್ಯಾರ್ಥಿಗಳಲ್ಲಿ ಹಲವಾರು ಪುಸ್ತಕಗಳನ್ನು ಕಳಿದು ಕೊಂಡಲ್ಲಿ ಅಥವಾ ಹಾಳುಮಾಡಿಕೊಂಡಲ್ಲಿ ಆ ಮಕ್ಕಳಿಗೆ ಪುನಃ ಉಚಿತವಾಗಿ ಸರ್ಕಾರದವರೇ ಪುಸ್ತಕಗಳನ್ನು ಒದಗಿಸಂವರೇ ?

ಆ) ಹಾಗಿದ್ದಲ್ಲಿ ಪೋಷಕರೇ ಖರೀದಿಸಬೇಕಾಗಿದ್ದಲ್ಲಿ ಸರ್ಕಾರದವರು ಪುಸ್ತಕಗಳನ್ನು ಕೊಳ್ಳಲು ವ್ಯವಸ್ಥೆ ಮಾಡುವರೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ಇಲ್ಲ.

ಆ) ಈ ದಿಸೆಯಲ್ಲಿ ಸೂಕ್ತ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಪಿ.ಸಿ. ಮಂಜಿನಸ್ವಾಮಿ.—ಸಂಬಂಧಪಟ್ಟ ಡಿ.ಡಿ.ಪಿ.ಐ.ನವರಿಗೆ ತಾವು ಆದೇಶ ಕೊಡಬೇಕು ಸಾರ್ವಜನಿಕ ದೂರುಗಳು ಬಂದರೆ ಅಥವಾ ಸ್ಥಳೀಯ ಶಾಸಕರಿಂದ ಪತ್ರ ಬಂದರೆ ಈ ಪುಸ್ತಕಗಳನ್ನು ಕೊಳ್ಳುವ ವ್ಯವಸ್ಥೆಯನ್ನು ಸರಿಯಾಗಿ ಮಾಡಬೇಕೆಂದು ಹೇಳುತ್ತೀರಾ ?

ಶ್ರೀ ಎಂ. ರಘುಪತಿ.—ವಿಚಾರ ಮಾಡುತ್ತೇನೆ.

ವಕ್ಫ್ ಆಸ್ತಿಗಳು

೯೯. ಶ್ರೀ ಮೊಹ್ಮದ್ ಮೊಯಿನುದ್ದೀನ್ (ಚಾಮರಾಜಪೇಟೆ).—ಮಾನ್ಯ ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಸರ್ಕಾರದ ಉಸ್ತುವಾರಿಯಲ್ಲಿರುವ ವಕ್ಫ್ ಆಸ್ತಿಗಳ ಸಂಖ್ಯೆ ಮತ್ತು ಹೆಸರು

(ಆ) ಹಾಗಿದ್ದಲ್ಲಿ ಆಸ್ತಿಗಳ ಸ್ಥಳ ಮತ್ತು ಪರಿಮಿತಿ

(ಇ) ಸರ್ಕಾರವು ಅಂತಹ ವಕ್ಫ್ ಆಸ್ತಿಗಳನ್ನು ವಕ್ಫ್ ಮಂಡಳಿಗೆ ವರ್ಗಾವಣೆ ಮಾಡದಿರಲು ಕಾರಣಗಳೇನು ?